# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಅಥಣಿ

---

ಸಿ.ಸಿ.ನಂ : **2264/2017** ದಿನಾಂಕ : **10.01.2024**
ಸಿ. ಡಬ್ಲೂ : **7**
ಪಿಡಬ್ಲೂ : **7**

---

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾಂತಾ ಸದಾಶಿವ ಪೂಜಾರಿ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಶೇತ್ಕಿ |
| ವಾಸಸ್ಥಳ | : | ಶಿವನೂರು |
| ದಿನಾಂಕ | : | 10.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

---

* * *

ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ

ಚಾಸಾ1 ನನ್ನ ಮಗ ಇರುತ್ತಾರೆ. ನನಗೆ ಚಾಸಾ 2 ಮತ್ತು 3 ರವರ ಪರಿಚಯ ಇರುವುದಿಲ್ಲ. ಚಾಸಾ 4 ನನ್ನ ಮೈದುನ , ಚಾಸಾ5 ನನ್ನ ಬಾವನ ಮಗ, ಚಾಸಾ6 ನನ್ನ ಬಾವನ ಹೆಂಡತಿ , ಮತ್ತು ಅರೋಪಿತರ ಪರಿಚಯ ಇರುತ್ತದೆ. ಚಾಸಾ8 ರವರ ಪರಿಚಯ ಇರುತ್ತದೆ. ಈಗ್ಗೆ 4 ವರ್ಷಗಳ ಹಿಂದೆ ನಾನು ಮನೆಯಲ್ಲಿದ್ದೆನು, ಗಲಾಟೆ ಕೇಳಿ ನಾನು ಜಮೀನಿಗೆ ಹೋದಾಗ ಆರೋಪಿತರು ಬಾವಿಯಲ್ಲಿ ಮೋಟಾರ ಗಳನ್ನು ಮತ್ತು ಪೈಪಗಳನ್ನು ಬಾವಿಯಲ್ಲಿ ಒಗೆದಿದ್ದರು. ಜಮೀನು ನಮ್ಮದೆ ಇರುತ್ತದೆ. ಆರೋಪಿತರು ಚಾಸಾ 1 ರವರಿಗೆ ದಂಡಿಗೆ ಮಾಡಿ ಹೊಡೆದಿರುತ್ತಾರೆ, ನಂತರ ಚಾಸಾ 1 ರವರು ದೂರು ನೀಡಿರುತ್ತಾರೆ. ಚಾಸಾ 1 ರವರಿಗೆ ರೂ. 40 ಸಾವಿರದಷ್ಟು ನಷ್ಟವಾಗಿರುತ್ತದೆ. ಸ್ಥಳದಲ್ಲಿ ತೊಗರಿ ಮತ್ತು ಜೋಳ ನಷ್ಟವಾಗಿರುತ್ತದೆ. ನನಗೆ ಇಷ್ಟೆ ಗೊತ್ತಿರುತ್ತದೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ವಕೀಲರವರಿಂದಃ</u>

ಘಟನೆಯ ದಿನಾಂಕ 19.07.2017 ರಂದು ಮುಂಜಾನೆ 11.00 ಗಂಟೆಗೆ ಆಗಿರುತ್ತದೆ ಎಂದರೆ ಇರಬಹುದು. ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಇನ್ನೊಂದು ಸಾರಿ ಜಮೀನಿಗೆ ಬಂದಲ್ಲಿ ಮೋಟಾರನ್ನು ಬಾವಿಯಲ್ಲಿ ಒಗೆದ ಹಾಗೆ ನಿಮ್ಮನ್ನು ಬಾವಿಯಲ್ಲಿ ಒಗೆದು ಕೊಲೆ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ .

<u>ಪಾಟೀ ಸವಾಲುಃ</u> ಆರೋಪಿತರ ಪರವಾಗಿ ಶ್ರೀ ಎಮ್ ಡಿ ಕೆ ವಕೀಲರಿಂದಃ

ಘಟನೆಯ ದಿನಾಂಕ ನನಗೆ ನೆನಪಿಲ್ಲ , 4 ವರ್ಷಗಳ ಹಿಂದೆ ಆಗಿರುತ್ತದೆ. ಘಟನೆ ನಡೆದಾಗ ನಾನು ಮನೆಯಲ್ಲಿದ್ದೆನು. ಮನೆಗೂ ಮತ್ತು ಬಾವಿಗೂ ಸ್ವಲ್ಪ ದೂರವಿರುತ್ತದೆ. ಮನೆಯ ಮುಂದೆ ನಿಂತುಕೊಂಡರೆ ಘಟನಾ ಸ್ಥಳ ಕಾಣುವುದಿಲ್ಲ ಎಂದರೆ ಸರಿ . ಘಟನೆ ನಡೆದಾಗ ನಾನು, ಚಾಸಾ1 , 4 ರಿಂದ 6 ಇದ್ದೆವು, ಬೇರೆ ಜನರು ಇರಲಿಲ್ಲ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ದೂರದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಹೇಳಿಕೆಯನ್ನು ಠಾಣೆಯಲ್ಲಿ ನೀಡಿರುತ್ತೇನೆ. ನೀವು ಮನಯಲ್ಲಿ ಇದ್ದುದರಿಂದ ಘಟನಾ ಸ್ಥಳದಲ್ಲಿ ಏನು ನಡೆಯಿತು ಅಂತಾ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಬಾವಿಯಲ್ಲಿ ಯಾರು ಮೋಟಾರಗಳನ್ನು ನುಗ್ಗಿಸಿದ್ದರು ಅಂತಾ ನೀವು ನೋಡಿಲ್ಲ ಎಂದರೆ ಸಾಕ್ಷಿಯು ತಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ನುಗ್ಗಿಸಿದ್ದರು , ಆರೋಪಿತರೆ ನುಗ್ಗಿಸಿದ್ದರು ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಜಮೀನಿನಲ್ಲಿ ಆರೋಪಿತರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ. ಹೇಳಿಕೆಯಲ್ಲಿ ಏನು ಬರೆಸಲಾಗಿದೆ ಅಂತಾ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ . ಆರೋಪಿತರು ಯಾವುದೇ ಮೋಟಾರು ಪೈಪನ್ನು ಎಸೆದಿಲ್ಲ , ಚಾಸಾ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಯಾವುದೇ ಪ್ರಾಣ ಬೆದರಿಕೆ ಹಾಕಿ , ನಷ್ಟ ರೂ. 40 ಸಾವಿರ ಮತ್ತು ರೂ. 1 ಸಾವಿರ ಉಂಟು ಮಾಡಿಲ್ಲ ಎಂದರೆ ಸರಿಯಲ್ಲ. ಘಟನೆಯು 11.00 ಗಂಟೆಗೆ ಆಗಿರುತ್ತದೆ. ನನ್ನ ಹೇಳಿಕೆಯನ್ನು ನನ್ನ ಮಕ್ಕಳು ಹೇಳಿ ಬರೆಸಿರುತ್ತಾರೆ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ನೀವು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ

ಸರಿಯಲ್ಲ. ಚಾಸಾ1 ನಿಮ್ಮ ಮಗ ಆಗಿದ್ದರಿಂದ , ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ